**ದಿನಾಂಕಃ 23-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಕೆ.ಎ. ವಕೀಲರಿಂದಃ**

05. ನಾನು ಬಿ.ಎಸ್ಸಿ ಪಧವಿದರ. ನಾನು ಗದಗದಲ್ಲಿ ಪದವಿ ಓದಿರುತ್ತೇನೆ. ಗದಗ ನನ್ನ ತಾಯಿಯ ಊರು ಎಂದರೆ ಸರಿ. ನನ್ನ ತಮ್ಮ ಜಯದೇವ ಹಾಗೂ ನನ್ನ ಸಹೋದರಿಯರಾದ ಮೂಲ ವಾದಿಯರು ಅಂದರೆ ಶಶಿಕಲಾ ಮತ್ತು ಸೂರ್ಯಕಲಾ ರವರ ವಿದ್ಯಾಭ್ಯಾಸ ಸಹ ಗದಗದಲ್ಲಿ ಆಗಿದೆ ಎಂದರೆ ಸರಿ. ನನ್ನ ತಂದೆ ಹಾಗೂ ಅವರ ಇಬ್ಬರ ಸಹೋದರರು ಅಡಿಕೆ ಹಾಗೂ ಮೆಣಸಿನಕಾಯಿಯ ವ್ಯಾಪಾರವನ್ನು ಕಮೀಶನ್ ಆಧಾರದ ಮೇಲೆ ಮಾಡುತ್ತಾ ಬಂದಿದ್ದರು ಎಂದರೆ ಸಾಕ್ಷಿ ನನ್ನ ಅಜ್ಜ ಇದ್ದ ಕಾಲಕ್ಕೆ ಮಾಡುತ್ತಿದ್ದರು ಎನ್ನುತ್ತಾರೆ. ನನ್ನ ಅಜ್ಜ 1949 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ನನ್ನ ಅಜ್ಜ ತೀರಿಕೊಂಡ ನಂತರ ನನ್ನ ತಂದೆ ಕುಟುಂಬದಲ್ಲಿ ಹಿರಿಯರಾದ್ದರಿಂದ ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಸದರಿ ಸಮಯದಲ್ಲಿ ನನ್ನ ತಂದೆ ಬ್ಯಾಡಗಿಯ ಎಪಿಎಂಸಿ ಯಾರ್ಡನಲ್ಲಿ ಜಾಗ ಖರೀದಿಸಿದ್ದರು ಎಂದರೆ ಸಾಕ್ಷಿ ಅದು ಮೊದಲೇ ನಮ್ಮ ಕುಟುಂಬದಲ್ಲಿ ಇತ್ತು ಎನ್ನುತ್ತಾರೆ.

06. ನನ್ನ ಅಜ್ಜ ತಿರೀಕೊಂಡಿ ನಂತರ ನನ್ನ ತಂದೆ ಹಾಗೂ ನನ್ನ ತಂದೆಯ ಇಬ್ಬರು ಸಹೋದರರ ಮದ್ಯೆ 1966 ರಲ್ಲಿ ಪಾಲು ವಿಭಾಗ ಆಗಿತ್ತು ಎಂದು ನಾನು ಈ ಮೊದಲು ಆದ ದಾವೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಸದರಿ ಎಪಿಎಂಸಿ ಯಾರ್ಡನಲ್ಲಿನ ಜಾಗದ ಮಾರಾಟಕ್ಕೆ ಸಂಬಂಧಿಸಿದಂತೆ 1987 ರಲ್ಲಿ ನನ್ನ ತಂದೆ ನನ್ನ ವಿರುದ್ದ ಹಾಗೂ ಸದರಿ ಸ್ವತ್ತಿನ ಖರೀದಿದಾರನ ವಿರುದ್ಧ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವಾ ಸಂಖ್ಯೆಃ 30/1985 ಎಂದರೆ ನನಗೆ ನೆನಪಿಲ್ಲ. ಸದರಿ ದಾವೆಯಲ್ಲಿನ ತೀರ್ಪಿನ ವಿರುದ್ಧ ನನ್ನ ತಂದೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿ ಅವರಂತೆ ಆದೇಶ ಆಯಿತು ಎಂದರೆ ಸಾಕ್ಷಿ ರಾಣೇಬೆನ್ನೂರಿನ ನ್ಯಾಯಾಲಯದಲ್ಲಿ ಅವರಂತೆ ಆದೇಶ ಆಯಿತು ಎನ್ನುತ್ತಾರೆ. ಸದರಿ ಮಾನ್ಯ ಉಚ್ಚ

ನ್ಯಾಯಾಲಯದ ಆದೇಶದ ವಿರುದ್ಧ ನನ್ನ ತಂದೆ ಸಿವಿಲ್ ಅಪೀಲು ಸಂಖ್ಯೆ: 7977/2002 ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದರು ಎಂದರೆ ಸಾಕ್ಷಿ ನನ್ನ ತಂದೆ, ನಾವು ಹಾಗೂ ಖರೀದಿದಾರರು ಸಹ ಮೇಲ್ಮನವಿ ದಾಖಲಿಸಿದ್ದೆವು ಎನ್ನುತ್ತಾರೆ. ಸದರಿ ಸರ್ವೋಚ್ಚ ನ್ಯಾಯಾಲಯದಲ್ಲಿ ಸದರಿ ಅಪೀಲು ಪುರಸ್ಕರಿಸಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಪ್ರಕರಣವನ್ನು ಮರುಪರಿಶೀಲನೆಗಾಗಿ ಕಳುಹಿಸಿದರು ಎಂದರೆ ನನಗೆ ಗೊತ್ತಿಲ್ಲ. ಹಾಗೂ ಸದರಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸದರಿ ಪ್ರಕರಣ ಮರುಪರಿಶೀಲನೆಗಾಗಿ ಬಂದ ನಂತರ ಅದು ಆರ್.ಎಫ್.ಎ. ನಂ. 658/1995 ದಿನಾಂಕ: 16.08.2012 ರಂದು ನಿಖಾಲಿಯಾಯಿತು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು 3 ನೇ ಎದುರುದಾರನಾಗಿದ್ದೆ ಎಂದರೆ ಸರಿ. ಈಗ ಸಾಕ್ಷಿ ಸದರಿ ಆರ್.ಎಫ್.ಎ. ನಂ. 658/1995 ದಿನಾಂಕ: 16.08.2012 ರ ತೀರ್ಪಿನ ಧೃಡಿಕೃತ ನಕಲನ್ನು ಸಾಕ್ಷಿಗೆ ತೋರಿಸಿದ್ದು ಸದರಿ ದಾಖಲೆ ಸಾಕ್ಷಿ ನೋಡಿ ಒಪ್ಪಿಕೊಂಡ ಮೇರೆಗೆ ಅದನ್ನುನಿಪಿ-10 ಎಂದು ಗುರುತಿಸಲಾಯಿತು.

07. ನನ್ನ ತಂದೆಯ ವಿರುದ್ಧ ನನ್ನ ತಂದೆಯ 2 ಜನ ಸಹೋದರರು ಸದರಿ ದಾವೆಯಲ್ಲಿನ ದಾವಾ ಸ್ವತ್ತನ್ನು ನನ್ನತಂದೆ ಒಟ್ಟು ಕುಟುಂಬದ ಹಿತಾಸಕ್ತಿಗೆ ವಿರುದ್ಧವಾಗಿ ದುಷ್ಚಟಗಳಿಗೆ ಬಲಿಯಾಗಿ ಮಾರಾಟ ಮಾಡಿರುತ್ತಾರೆ ಎಂದು ಅಪಾಧಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಒಂದೇ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿ ಇದ್ದಿದ್ದರಿಂದ ಮಾರಾಟ ಮಾಡಿದ್ದರು ಎನ್ನುತ್ತಾರೆ. ಉಳಿದ ಆಸ್ತಿಗಳು ನನ್ನ ಅಜ್ಜನಿಂದ ಮೊಮ್ಮಕ್ಕಳಿಗೆ ನೇರವಾಗಿ ಬಂದಿದ್ದವು ಎನ್ನುತ್ತಾರೆ. ಆರ್.ಎಫ್.ಎ. ನಂ. 658/1995 ದಿನಾಂಕ: 16.08.2012 ರ ತೀರ್ಪಿನ ವಿರುದ್ಧ ನಾವು ಮೇಲ್ಮನವಿ ಸಲ್ಲಿಸಿದ್ದೆವೊ ಇಲ್ಲವೊ ಎಂದು ನನಗೆ ನೆನಪಿಲ್ಲ. ಸದರಿ ಆದೇಶವನ್ನು ನಾವು ಪ್ರಶ್ನಿಸಿದ್ದೆವು ಎಂದು ಸಾಕ್ಷಿ ಮುಂದುವರೆದು ಹೇಳುತ್ತಾರೆ. ಸದರಿ ಆದೇಶದ ವಿರುದ್ಧ ನಾವು ಮೇಲ್ಮನವಿ ಸಲ್ಲಿಸಿದ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ನನ್ನ ತಂದೆಯ ಸಹೋದರರು ದಾಖಲಿಸಿದ ದಾವೆಗೆ ಪೂರಕವಾಗಿ ನಾನು ಹಾಗೂ ನನ್ನ ಸಹೋದರ 2 ನೇ ಪ್ರತಿವಾದಿ ಸದರಿ ದಾವೆಯಲ್ಲಿ ನಮ್ಮ ಪ್ರತಿವಾದ

ಪತ್ರವನ್ನು ಸಲ್ಲಿಸಿದ್ದೆವು ಎಂದರೆ ಸರಿ. ನನ್ನ ಕುಟುಂಬದ ವ್ಯವಹಾರದಲ್ಲಿ 1954 ರಿಂದ 1958 ರ ಅವಧಿಯಲ್ಲಿ ಸಾಕಷ್ಟು ನಷ್ಟವಾಗಿ ಅದಕ್ಕೆ ಸಂಬಂಧಿಸಿದಂತೆ ಹಣ ವಸೂಲಾತಿಗಾಗಿ ನಮ್ಮ ವಿರುದ್ಧ ಸಾಕಷ್ಟು ಪ್ರಕರಣಗಳು ದಾಖಲಾಗಿದ್ದವು ಎಂದರೆ ಸಾಕ್ಷಿ ನಷ್ಟ ಆಗಿತ್ತು ಆದರೆ ನನಗೆ ಸರಿಯಾಗಿ ನೆನಪಿಲ್ಲ ನಾವು ಚಿಕ್ಕವರಿದ್ದೆವು ಎನ್ನುತ್ತಾರೆ. ಸದರಿ ಅಸಲು ದಾವಾ ಸಂಖ್ಯೆಃ 30/1985 ರಲ್ಲಿ ನನ್ನ ಚಿಕ್ಕಪ್ಪಂದಿರು ಸದರಿ ದಾವೆಯ ದಾವಾ ಸ್ವತ್ತನ್ನುನೋಡಿಕೊಳ್ಳುತ್ತಿದ್ದರು ಎಂತಲೂ ಹಾಗೂ ಅದರಿಂದ ಬಂದ ಆದಾಯದ ಪೈಕಿ ನಮ್ಮ ಭಾಗವನ್ನು ನಮಗೆ ನೀಡುತ್ತಿದ್ದರು ಎಂದು ಅದರಲ್ಲಿ ಪ್ರತಿಪಾದನೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

08. ನಾನು ಬ್ಯಾಡಗಿಯ 2-3 ಸ್ಥಳೀಯ ಮುನ್ಸಿಪಲ್ ಚುನಾವಣೆಯಲ್ಲಿ ಸ್ಪರ್ಧಿಸಿರುತ್ತೇನೆ. ಯಾವ ಯಾವ ಇಸವಿನಲ್ಲಿ ನಾನು ಚುನಾವಣೆಯಲ್ಲಿ ಸ್ಪರ್ಧಿಸಿರುತ್ತೇನೆ ಎಂದು ನೆನಪಿಲ್ಲ. ಸಾಕ್ಷಿ ಮುಂದುವರೆದು 2 ಬಾರಿ ಪುರಸಭೆ ಚುನಾವಣೆ, 2 ಬಾರಿ ಪಿ.ಎಲ್.ಡಿ ಬ್ಯಾಂಕಿಗೆ ಸಂಬಂಧಿಸಿದ ಚುನಾವಣೆ ಹಾಗೂ 1 ಬಾರಿ ಎಪಿಎಂಸಿ ಚುನಾವಣೆಯಲ್ಲಿ ಸ್ಪರ್ಧಿಸಿರುತ್ತೇನೆ ಎನ್ನುತ್ತಾರೆ. ಸದರಿ ಚುನಾವಣೆಯಲ್ಲಿ ಮಾಡಿದ ಖರ್ಚಿಗೆ ಸಂಬಂಧಿಸಿದಂತೆ ನಾನ ಪ್ರತ್ಯೇಕ ಲೆಕ್ಕಪತ್ರ ಇಟ್ಟಿರುತ್ತೇನೆ ಎಂದರೆ ಸಾಕ್ಷಿ ನಾನು ಯಾವುದೇ ಖರ್ಚು ಚುನಾವಣೆಗೆ ಸಂಬಂಧಿಸಿದಂತೆ ಮಾಡಿಲ್ಲ ಎನ್ನುತ್ತಾರೆ.

09. ನನ್ನ ಸ್ವಂತ ಹೆಸರಿನಲ್ಲಿ ಬ್ಯಾಡಗಿಯಲ್ಲಿ ಯಾವುದೇ ವ್ಯವಹಾರವನ್ನು ಮಾಡಿಲ್ಲ. 2 ನೇ ವಾದಿಯ ಗಂಡ ಸುಭಾಸರವರೊಟ್ಟಿಗೆ ಗದಗನಲ್ಲಿ ವ್ಯವಹಾರ ಮಾಡಿರುತ್ತೇನೆ ಎನ್ನುತ್ತಾರೆ. ಸದರಿ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳು ಈಗ ನನ್ನ ಬಳಿ ಇಲ್ಲ. ಸದರಿ ವ್ಯವಹಾರದ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ಹೇಳಿಲ್ಲಎಂದರೆ ಸರಿ. ಸದರಿ 2 ನೇ ವಾದಿಯ ಗಂಡ ಸುಭಾಸರವರೊಟ್ಟಿಗೆ ನಾನು ಯಾವುದೇ ಪಾಲುದಾರಿಕೆ ವ್ಯವಾಹರ ಮಾಡದೇ ಇದ್ದರೂ ಸಹ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಾಲುದಾರಿಕೆಯಲ್ಲಿ ನನಗೆ ಬಂದ ಆದಾಯದ ಬಗ್ಗೆ ನನ್ನ ಐಟಿ ರಿಟರ್ನ್ಸ್ ರಲ್ಲಿ ತೋರಿಸಿದ ಬಗೆಗಿನ ಯಾವುದೇ ದಾಖಲೆಗಳು ನನ್ನ ಬಳಿ ಇಲ್ಲ.

10. 3 ಮತ್ತು 4 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ ಆಸ್ತಿಗೆ ಸಂಬಂಧಿಸಿದ ಖರೀದಿ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ನಾನು ಓದಿರುತ್ತೇನೆ. ಸದರಿ ಖರೀದಿ ಪತ್ರದಲ್ಲಿ ಸದರಿ ಮಾರಾಟ ಮಾಡುತ್ತಿರುವ ಸ್ವತ್ತುಗಳು ನಮ್ಮ ಒಟ್ಟುಕುಟುಂಬದ ಸ್ವತ್ತುಗಳು ಎಂದು ಹೇಳಿ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಸ್ವಾಧೀನದಲ್ಲಿರುವ ಸ್ವತ್ತುಗಳು ಎಂದು ಹೇಳಿ ಮಾರಾಟ ಮಾಡಿರುತ್ತೇನೆ ಎನ್ನುತ್ತಾರೆ. ಈ ದಾವೆ ದಾಖಲಿಸುವ ಪೂರ್ವದಲ್ಲಿ ನನ್ನ ಇಬ್ಬರೂ ಸಹೋದರಿಯರು ಅಂದರೆ ವಾದಿಯರು ದಾವಾ ಸ್ವತ್ತಿನಲ್ಲಿ ತಮ್ಮ ಹಿಸ್ಸೆಯನ್ನು ನೀಡುವಂತೆ ನಮಗೆ ನೋಟಿಸ್ಸು ನೀಡಿದ್ದರು ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಅಂಚೆಯ ಒಂದು ಸ್ವೀಕೃತಿ ಪತ್ರವನ್ನು ತೋರಿಸಿದ್ದು ಸದರಿ ಸ್ವೀಕೃತಿ ಪತ್ರದ ಮೇಲಿರುವ 2 ನೇ ಪ್ರತಿವಾದಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-11 ಎಂದು, 2 ನೇ ಪ್ರತಿವಾದಿಯ ಸಹಿಯನ್ನು ನಿಪಿ-11 ಎ ಎಂದು ಗುರುತಿಸಲಾಯಿತು.

11. ಈಗ ಸಾಕ್ಷಿಗೆ ಸರ್ವೆ ನಂ.307/1 ಬಿ/2 ರ ಆರ್.ಟಿ.ಸಿ ಯನ್ನು ತೋರಿಸಿದ್ದು ಸದರಿ ಆರ್.ಟ.ಸಿ ಯನ್ನು ನೋಡಿ ಸದರಿ ಜಮೀನು ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಜಮೀನು ಎಂದು ಗುರುತಿಸಿದ್ದರಿಂದ ಸದರಿ ಆರ್.ಟಿ.ಸಿ ಯನ್ನು ನಿಪಿ-12 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಸರ್ವೆ ನಂ.307/5 ರ ಆರ್.ಟಿ.ಸಿ ಯನ್ನು ತೋರಿಸಿದ್ದು ಸದರಿ ಆರ್.ಟ.ಸಿ ಯನ್ನು ನೋಡಿ ಸದರಿ ಜಮೀನು ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಜಮೀನು ಎಂದು ಗುರುತಿಸಿದ್ದರಿಂದ ಸದರಿ ಆರ್.ಟಿ.ಸಿ ಯನ್ನು ನಿಪಿ-13 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಸರ್ವೆ ನಂ.307/1 ಎ ರ ಆರ್.ಟಿ.ಸಿ ಯನ್ನು ತೋರಿಸಿದ್ದು ಸದರಿ ಆರ್.ಟ.ಸಿ ಯನ್ನು ನೋಡಿ ಸದರಿ ಜಮೀನು ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಜಮೀನು ಎಂದು ಗುರುತಿಸಿದ್ದರಿಂದ ಸದರಿ ಆರ್.ಟಿ.ಸಿ ಯನ್ನು ನಿಪಿ-14 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಸರ್ವೆ ನಂ.307/14 ರ ಆರ್.ಟಿ.ಸಿ ಯನ್ನು ತೋರಿಸಿದ್ದು ಸದರಿ ಆರ್.ಟ.ಸಿ ಯನ್ನು ನೋಡಿ ಸದರಿ ಜಮೀನು ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಜಮೀನು ಎಂದು ಗುರುತಿಸಿದ್ದರಿಂದ ಸದರಿ ಆರ್.ಟಿ.ಸಿ ಯನ್ನು ನಿಪಿ-15 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಸರ್ವೆ ನಂ.267 ಬಿx1 ರ ಆರ್.ಟಿ.ಸಿ ಯನ್ನು

ತೋರಿಸಿದ್ದು ಸದರಿ ಆರ್.ಟಿ.ಸಿ ಯನ್ನು ನೋಡಿ ಸದರಿ ಜಮೀನು ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಜಮೀನು ಎಂದು ಗುರುತಿಸಿದ್ದರಿಂದ ಸದರಿ ಆರ್.ಟಿ.ಸಿ ಯನ್ನು ನಿಪಿ-16 ಎಂದು ಗುರುತಿಸಲಾಯಿತು.

12. ಈಗ ಸಾಕ್ಷಿಗೆ ಸಿಟಿಎಸ್ ನಂ.706 ರ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ತೋರಿಸಿದ್ದು ಸದರಿ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ಸಾಕ್ಷಿ ನೋಡಿ ಸದರಿ ಆಸ್ತಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿ ಎಂದು ಗುರುತಿಸಿದ್ದರಿಂದ ಸದರಿ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ನಿಪಿ-17 ಎಂದು ಗುರುತಿಸಲಾಯಿತು. ಅದೇರೀತಿ ಈಗ ಸಾಕ್ಷಿಗೆ ಸಿಟಿಎಸ್ ನಂ.393 ರ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ತೋರಿಸಿದ್ದು ಸದರಿ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ಸಾಕ್ಷಿ ನೋಡಿ ಸದರಿ ಆಸ್ತಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿ ಎಂದು ಗುರುತಿಸಿದ್ದರಿಂದ ಸದರಿ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ನಿಪಿ-18 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸಿಟಿಎಸ್ ನಂ.391 ರ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ತೋರಿಸಿದ್ದು ಸದರಿ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ಸಾಕ್ಷಿ ನೋಡಿ ಸದರಿ ಆಸ್ತಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿ ಎಂದು ಗುರುತಿಸಿದ್ದರಿಂದ ಸದರಿ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ನಿಪಿ-19 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸಿಟಿಎಸ್ ನಂ.705 ರ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ತೋರಿಸಿದ್ದು ಸದರಿ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ಸಾಕ್ಷಿ ನೋಡಿ ಸದರಿ ಆಸ್ತಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿ ಎಂದು ಗುರುತಿಸಿದ್ದರಿಂದ ಸದರಿ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ನಿಪಿ-20 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸಿಟಿಎಸ್ ನಂ.392 ಎ ರ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ತೋರಿಸಿದ್ದು ಸದರಿ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ಸಾಕ್ಷಿ ನೋಡಿ ಸದರಿ ಆಸ್ತಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿ ಎಂದು ಗುರುತಿಸಿದ್ದರಿಂದ ಸದರಿ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ನಿಪಿ-21 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸಿಟಿಎಸ್ ನಂ.707 ರ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ತೋರಿಸಿದ್ದು ಸದರಿ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ಸಾಕ್ಷಿ ನೋಡಿ ಸದರಿ ಆಸ್ತಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿ ಎಂದು ಗುರುತಿಸಿದ್ದರಿಂದ ಸದರಿ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ನಿಪಿ-22 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸಿಟಿಎಸ್ ನಂ.392 ಬಿ ರ

ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ತೋರಿಸಿದ್ದು ಸದರಿ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ಸಾಕ್ಷಿ ನೋಡಿ ಸದರಿ ಆಸ್ತಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿ ಎಂದು ಗುರುತಿಸಿದ್ದರಿಂದ ಸದರಿ ಪ್ರಾಪರ್ಟಿ ರಿಜಿಸ್ಟರ್ ಕಾರ್ಡನ್ನು ನಿಪಿ-23 ಎಂದು ಗುರುತಿಸಲಾಯಿತು.

13. ನನ್ನ ಹಾಗೂ 2 ನೇ ಪ್ರತಿವಾದಿಯ ಮದ್ಯೆ ಯಾವುದೇ ವೈಮನಸ್ಸು ಇಲ್ಲ ಎಂದರೆ ಸರಿ. ಈಗ ಸಾಕ್ಷಿಗೆ ದಿನಾಂಕಃ 16.03.2015 ರ ನೋಟಿಸ್ಸಿನ ಕಚೇರಿ ಪ್ರತಿಯನ್ನು ತೋರಿಸಿದ್ದು ಸದರಿ ನೋಟಿಸ್ಸನ್ನು ವಾದಿಯರು ನಮಗೆ 2015 ನೇ ಸಾಲಿನಲ್ಲಿ ಕೊಟ್ಟಿದ್ದು ಎಂದು ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ನೋಟಿಸ್ಸಿನ ಪ್ರತಿಯನ್ನು ನಿಪಿ-24 ಎಂದು ಗುರುತಿಸಲಾಂತು. ಸದರಿ ನೋಟಿಸ್ಸಿಗೆ ಪ್ರತ್ಯುತ್ತರ ನೀಡಿದ್ದೇವೊ ಎಲ್ಲವೊ ಎಂದು ನೆನಪಿಲ್ಲ. 2016 ನೇ ಸಾಲಿನಲ್ಲಿ 3 ಮತ್ತು 4 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ ಸ್ವತ್ತಿಗೆ ಸಂಬಂಧಿಸಿದ ಕ್ರಯ ಪತ್ರದಲ್ಲಿ ವಾದಿಯರು 2015 ನೇ ಸಾಲಿನಲ್ಲಿ ನಮಗೆ ಹಿಸ್ಸೆಕೇಳಿ ನೀಡಿದ ನೋಟಿಸ್ಸಿನ ಬಗ್ಗೆ ಬರೆದಿದ್ದೇವೊ ಇಲ್ಲವೊ ಎಂದು ನನಗೆ ನೆನಪಿಲ್ಲ. ಸದರಿ 3 ಮತ್ತು 4 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ ಸ್ವತ್ತಿನ ಪ್ರತಿಫಲವನ್ನು ವಾದಿಯರಿಗೆ ನೀಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಪ್ರತಿಫಲವನ್ನು ಅವರಿಗೆ ನೀಡುವ ಪ್ರಶ್ನೇ ಬರುವುದಿಲ್ಲ ಎನ್ನುತ್ತಾರೆ.

14. 1 ನೇ ವಾದಿ 2025 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ನಿಖರವಾದ ದಿನಾಂಕ ನೆನಪಿಲ್ಲ. ಸದರಿ 1 ನೇ ವಾದಿಯ ಗಂಡ ಮತ್ತು ಮಕ್ಕಳು ವಾದಿ ನಂ.1(ಎ) ಯಿಂದ 1(ಡಿ) ಆಗಿರುತ್ತಾರೆ ಎಂದರೆ ಸರಿ. ಸದರಿ 1 ನೇ ವಾದಿಗೆ ವಾದಿ ನಂ.1(ಎ) ಯಿಂದ 1(ಡಿ) ರವರು ಮಾತ್ರ ವಾರಸುದಾರರು ಇರುತ್ತಾರೆ ಎಂದರೆ ಸರಿ. ವಾದಿಯರು ದಾವೆಯಲ್ಲಿ ಕೇಳಿರುವ ಪರಿಹಾರ ನೀಡಲು ಅಂದರೆ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ನೀಡಲು ನಮ್ಮದು ತಕರಾರು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಕರಾರು ಇದೆ ಎನ್ನುತ್ತಾರೆ.

15. 2 ನೇ ವಾದಿಯ ಮದುವೆ ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಆಗಿದೆ ಎಂದರೆ ಸರಿ. 1 ನೇ ವಾದಿಯ ಮದುವೆ ಬೆಳಗಾವಿ ಜಿಲ್ಲೆಯ ದುರದುಂಡೇಶ್ವರ ಮಠದಲ್ಲಿ ಆಗಿದೆ. ಸದರಿ ವಾದಿಯರ ಮದುವೆ ಸಮಯದಲ್ಲಿ ನನ್ನ ತಂದೆಗೆ ಸಾಕಷ್ಟು ಆದಾಯ ಇರಲಿಲ್ಲ ಎಂದರೆ ಸರಿ. ನನ್ನ ತಂದೆಗೆ ಸದರಿ ಸಮಯದಲ್ಲಿ ಸಾಕಷ್ಟು ಆದಾಯ ಇಲ್ಲದೇ ಇದ್ದುದ್ದರಿಂದ ನಮ್ಮ 4 ಜನರ ವಿದ್ಯಾಭ್ಯಾಸ ನನ್ನ ತಾಯಿಯ ತವರು ಮನೆಯಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿ ನನ್ನ ತಂದೆಗೆ ಸಾಕಷ್ಟು ಆದಾಯ ಇರಲಿಲ್ಲ ಎನ್ನುವೂದು ಸಹ ಒಂದು ಕಾರಣ ಹಾಗೂ ಬ್ಯಾಡಗಿಯಲ್ಲಿ ಆಗ ಶಾಲಾ-ಕಾಲೇಜುಗಳು ಇರಲಿಲ್ಲ ಎನ್ನುತ್ತಾರೆ. ಸದರಿ ಆರ್.ಎಫ್.ಎ ನಂ.658/1995 ರಲ್ಲಿ ದಿನಾಂಕಃ 16.08.2012 ರಂದು ಮಾಡಿದ ಆದೇಶದಲ್ಲಿ ನನ್ನ ತಂದೆ ದುಶ್ಚಟಗಳಿಗೆ ಬಲಿಯಾಗಿದ್ದರಿಂದ ನನ್ನ ತಾಯಿ ತನ್ನ ಮಕ್ಕಳೊಂದಿಗೆ ತವರೂರಲ್ಲಿ ವಾಸವಾದರು ಎಂದು ಬರೆಯಲಾಗಿದೆ ಎಂದರೆ ಇರಬಹುದು. ನನ್ನ ತಂದೆ ಎಪಿಎಂಸಿ ಯಲ್ಲಿನ ಸ್ವತ್ತನ್ನು ಮಾರಾಟ ಮಾಡಿದ್ದ ಕ್ರಯ ಪತ್ರವನ್ನು ರದ್ದತಿ ಕೋರಿ ನನ್ನ ತಂದೆಯ ಸಹೋದರರು ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯನ್ನು ನನ್ನ ತಂದೆಯ ಸಹೋದರರು ದುರ್ಲಾಬ ಪಡೆಯುವ ಉದ್ದೇಶದಿಂದ ದಾಖಲಿಸಿರುತ್ತಾರೆ ಎಂದು ಹಾಗೂ ನನ್ನ ತಂದೆ ಬರೆದುಕೊಟ್ಟ ಕ್ರಯ ಪತ್ರ ಸರಿಯಾಗಿದೆ ಎಂದು ಹಾಗೂ ಸದರಿ ಕ್ರಯ ಪತ್ರವನ್ನು ರದ್ದು ಪಡಿಸಲಾಗುವುದಿಲ್ಲ ಎಂದು ಸದರಿ ಮಾನ್ಯ ಉಚ್ಚನ್ಯಾಯಾಲಯದ ತೀರ್ಪಿನಲ್ಲಿ ಹೇಳಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಉಚ್ಚ ನ್ಯಾಯಾಲಯದ ಆದೇಶವನ್ನು ನಾನು ಓದಿರಬಹುದು ಆದರೆ ಈಗ ನೆನಪಿಲ್ಲ ಎನ್ನುತ್ತಾರೆ.

16. ನಾನು ನನ್ನ ಕುಟುಂಬದ ಆದಾಯ, ಖರ್ಚು-ವೆಚ್ಚ ಹಾಗೂ ಉಳಿತಾಯದ ಬಗ್ಗೆ ಲೆಕ್ಕಪತ್ರ ಇಟ್ಟಿಲ್ಲ. 2 ನೇ ಪ್ರತಿವಾದಿ ಯಾವ ವ್ಯವಹಾರ ಮಾಡುತ್ತಿದ್ದಾನೆ ಹಾಗೂ ಅವರಿಗೆ ಎಷ್ಟು ಆದಾಯ ಇದೆ ಎಂಬ ಬಗ್ಗೆ ನಾನು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಅವರು ಯಾವುದೇ ವ್ಯವಹಾರ ಮಾಡುತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ತಲಾ ¼ ಹಿಸ್ಸೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ ಸ್ವತ್ತಿನ ಪ್ರತಿಫಲವನ್ನು ನಮ್ಮ ಕುಟುಂಬದ

ಹಿತಾಸಕ್ತಿಗೆ ಹಾಗೂ ಅಡಚಣೆಗಾಗಿ ಬಳಸಿಲ್ಲ ಎಂದರೆ ಸಾಕ್ಷಿ ನನ್ನ ತಮ್ಮನ 3 ಜನ ಹೆಣ್ಣು ಮಕ್ಕಳ ಹಾಗೂ ಓರ್ವ ಮಗನ ಮದುವೆ ಖರ್ಚಿಗಾಗಿ ಹಾಗೂ ಸದರಿಯವರ ಇಂಜಿನಿಯರಿಂದ ವಿದ್ಯಾಭ್ಯಾಸಕ್ಕಾಗಿ ಬಳಸಲಾಗಿದೆ ಎನ್ನುತ್ತಾರೆ. ಸದರಿ ವಿಷಯವನ್ನು ನಾನು ಸದರಿ ಕ್ರಯ ಪತ್ರದಲ್ಲಿ ಬರೆಯಿಸಿದ್ದೆನೋ ಇಲ್ಲವೊ ಎಂದು ನನಗೆ ನೆನಪಿಲ್ಲ. ಸದರಿ ಕ್ರಯ ಪತ್ರದ ಪ್ರತಿ ನನ್ನ ಬಳಿ ಇಲ್ಲ. ಸದರಿ ಕ್ರಯ ಪತ್ರವನ್ನು ಓದಿ ನೋಡಿ ಸಹಿ ಮಾಡಿದ್ದೆ ಎಂದರೆ ಸರಿ.

17. ಈ ದಾವೆ ದಾಖಲಿಸಿದ ನಂತರ ನಾನು ಹಾಗೂ 2ನೇ ಪ್ರತಿವಾದಿ ಅಸಲು ದಾವೆ ನಂ.200/2017 ನ್ನು ಸಿವಿಲ್ ಜಡ್ಜ ಮತ್ತು ಜೆಎಂ.ಎಫ್. ನ್ಯಾಯಾಲಯದಲ್ಲಿ ದಾಖಲಿಸಿದ್ದೆವು ಎಂದರೆ ಸರಿ. ಸದರಿ ದಾವೆಯ ವಾದ ಪತ್ರದ ಧೃಡಿಕೃತ ನಕಲನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅದನ್ನು ಒಪ್ಪಿಕೊಂಡ ಮೇರೆಗೆ ಸದರಿ ದಾವೆಯ ವಾದ ಪತ್ರವನ್ನು ನಿಪಿ-25 ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ಅಂತಿಮ ಆದೇಶ ಏನು ಆಗಿದೆ ಎಂದು ನನಗೆ ನೆನಪಿಲ್ಲ. ಸದರಿ ದಾವೆಯಲ್ಲಿ ನಾನು ಸಾಕ್ಷ್ಯ ನುಡಿದಿಲ್ಲ. ಸದರಿ ದಾವೆ ದಿನಾಂಕಃ 21.09.2022 ರಂದು ದಾವೆ ವಜಾಗೊಂಡಿರುತ್ತದೆ ಎಂದರೆ ನನಗೆ ನೆನಪಿಲ್ಲ. ನಾನು ಯಾವಾಗಲೂ ದುರ್ವ್ಯಾಜ್ಯ ಮಾಡುತ್ತಾ ನಮ್ಮ ಕುಟುಂಬದ ಆದಾಯ ಲೆಕ್ಕ ಪತ್ರವನ್ನು ನಿರ್ವಹಿಸದೇ ಬಂದಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರು ನಮಗೆ 2015 ರಲ್ಲಿ ನೀಡಿದ ನೋಟಿಸ್ಸಿನ ನಂತರವೂ ಸಹ ನಾವು ನಮ್ಮ ಕುಟುಂಬದ ಆದಾಯಕ್ಕೆ ಸಂಬಂಧಿಸಿದಂತೆ ಯಾವುದೇ ಲೆಕ್ಕಪತ್ರವನ್ನು ನಿರ್ವಹಿಸಿಲ್ಲ. ವಾದಿಯರ ಮದುವೆಯನ್ನು ನಮ್ಮ ಕುಟುಂಬದಿಂದ ಮಾಡಲು ಸಾಧ್ಯವಾಗದೇ ಇದ್ದುದ್ದರಿಂದ ಸದರಿ ವಾದಿಯರ ಗಂಡಿನ ಮನೆಯವರು ಮದುವೆಯ ಖರ್ಚನ್ನು ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ನಿಜ ವಿದ್ಯಮಾನ ಗೊತ್ತಿದ್ದರೂ ಸಹ ವಾದಿಯರಿಗೆ ಹಿಸ್ಸೆ ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಹಿಸ್ಸೆ ನೀಡಬಾರದು ಎಂದು ತಿಳಿದು ಈ ದಾವೆಗೆ ಅಗತ್ಯ ಪಕ್ಷಗಾರರ ಅಗತ್ಯತೆ ಇರುತ್ತದೆ ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ.

3 ಮತ್ತು 4 ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.